**ದಿನಾಂಕ: 10-04-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ ಆರ್.ಪಿ.ಕೆ. ವಕೀಲರಿಂದ**

1. ಮೊಹ್ಮದ ಅಯುಬ್ ನನ್ನ ಗಂಡನಾಗಬೇಕು. ನಿಮ್ಮ ಗಂಡ ಹುಟ್ಟಿದ ವರ್ಷ 1989 ಎಂದರೆ ಸರಿ. ಪೊಲೀಸರು ಹಾಕಿದಂತಹ ದೋಷಾರೋಪಣೆ ಪತ್ರದಲ್ಲಿ ಕಾರಿನವರು ಆಟೊಗೆ ಎದುರಿನಿಂದ ಅಪಘಾತಪಡಿಸಿದೆ ಎಂದು ಹಾಕಿದ್ದಾರೆ ಎಂದರೆ ಸರಿ. ನಿಪಿ-6 IMV ವರದಿ ಪ್ರಕಾರ ಆಟೋದ ಮುಂದಿನ ಭಾಗಕ್ಕೆ ಜಖಂಗಳು ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕಾರ್ ನಂ.ಕೆಎ-32 ಪಿ-3229 ರಿಂದ ಯಾವುದೇ ಅಪಘಾತ ಮಾಡಿಲ್ಲ ಎಂದರೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ಗಂಡ ಆಟೋ ನಂ.ಕೆಎ-33-7793 ನೇದ್ದನ್ನು ತನ್ನ ತಪ್ಪಿನಿಂದಲೇ ಪಲ್ಟಿಮಾಡಿ ಅಪಘಾತಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಿಮ್ಮ ಗಂಡ ಆಟೋವನ್ನು ಚಲಾಯಿಸುತ್ತಿದ್ದರು ಎಂದು ತೋರಿಸಲು ವಾಹನ ಚಾಲನಾ ಪರವಾನಿಗೆ ಏನಾದರೂ ಹಾಜರುಪಡಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಹನ ಚಾಲನಾ ಪರವಾನಿಗೆಯನ್ನು ಹಾಜರುಪಡಿಸಬಹುದಾ ಎಂದರೆ ಹಾಜರುಪಡಿಸಬಹುದು ಎಂದು ಉತ್ತರಿಸುತ್ತಾರೆ.

2. ನಿಮ್ಮ ಗಂಡ ತಿಂಗಳಿಗೆ 21 ಸಾವಿರ ರೂಪಾಯಿ ಗಳಿಸುತ್ತಿದ್ದರು ಎಂದು ತೋರಿಸಲು ದಾಖಲೆ ಏನಾದರೂ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ಗಂಡನ ತಪ್ಪಿನಿಂದ ಅಪಘಾತವಾಗಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಕಾರ್ ಚಾಲಕನ ಮೇಲೆ ಸುಳ್ಳು ಕೇಸನ್ನು ಮಾಡಿದ್ದೀರಿ ಎಂದರೆ ಸರಿಯಲ್ಲ. ಆದ್ದರಿಂದ 2ನೇ ಎದುರುದಾರರು ಯಾವುದೇ ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ